"ಕರಡು ನಿಯಮಗಳು"

# ಸಮಾಜ ಕಲ್ಯಾಣ ಇಲಾಖೆ

# ಅಧಿಸೂಚನೆ

**ಸಂಖ್ಯೆ:ಸಕಇ 167 ಎಸ್‌ಎಲ್‌ಪಿ 2017 (ಭಾ-1) ಬೆಂಗಳೂರು, ದಿನಾಂಕ. 02-08-2017**

*******

## ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ (ಕರ್ನಾಟಕ ಕಾಯಿದೆ 2013ರ 65 ಮತ್ತು ತಿದ್ದುಪಡಿ ಕಾಯಿದೆ 2017) 27ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–**

(ಎ) ಈ ನಿಯಮಗಳನ್ನು, ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017 ಎಂದು ಕರೆಯತಕ್ಕದ್ದು.

(ಬಿ) ಈ ನಿಯಮಗಳು ಕರ್ನಾಟಕ ರಾಜ್ಯದ ಸರ್ಕಾರಿ ರಾಜ್ಯಪತ್ರದಲ್ಲಿ ಈ ಉದ್ದೇಶಕ್ಕಾಗಿ ಅಧಿಸೂಚಿತವಾಗುವ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–**

(1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ"ಎಂದರೆ, ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013 (ಕರ್ನಾಟಕ ಕಾಯಿದೆ 2013ರ 65) ಮತ್ತು ತಿದ್ದುಪಡಿ ಕಾಯಿದೆ 2017.

(ಬಿ) "ಹಂಚಿಕೆ ಮಾಡಬಹುದಾದ ಆಯವ್ಯಯ" ಎಂದರೆ, ವಿನಾಯಿತಿಸಲಾದ ವೆಚ್ಚವನ್ನು ಹೊರತುಪಡಿಸಿ ರಾಜ್ಯದ ಸಂಚಿತ ನಿಧಿಯಲ್ಲಿನ ಒಟ್ಟು ವೆಚ್ಚ.

(ಸಿ) "ಜನಗಣತಿ" ಎಂದರೆ, ಜನಗಣತಿ ಅಧಿನಿಯಮ, 1948ರ ಮೇರೆಗೆ ಭಾರತ ಸರ್ಕಾರವು ನಡೆಸಿದ ಜನಗಣತಿ;

(ಡಿ) "ವಿನಾಯಿತಿಸಲಾದ ವೆಚ್ಚ" ಎಂದರೆ, ಈ ಅಧಿನಿಯಮದ ಅನ್ವಯದಿಂದ ವಿನಾಯಿತಿಗೊಳಿಸಲಾದ ವೆಚ್ಚ ಮತ್ತು ಇದು ವೇತನ, ವೇತನ ಸಹಾಯಾನುದಾನ, ಪಿಂಚಣಿ, ಆಡಳಿತಾತ್ಮಕ ವೆಚ್ಚ, ಮೂಲಧನ ಮರುಸಂದಾಯ ಮತ್ತು ರಾಜ್ಯ ಸರ್ಕಾರದ ತನ್ನದೇ ಸಾಲಗಳ ಲೆಕ್ಕದ ಮೇಲೆ ಬಡ್ಡಿ ಸಂದಾಯ ಮತ್ತು ರಾಜ್ಯ ಸರ್ಕಾರದ ಉದ್ಯಮಗಳ ಮೂಲಕ ಆಯವ್ಯಯ-ಹೊರತಾದ ಸಾಲಗಳು ಹಾಗೂ ರಾಜ್ಯ ಸರ್ಕಾರವು ಅಧಿಸೂಚಿಸಿದ ಆಡಳಿತಾತ್ಮಕ ಸ್ವರೂಪದ ಇತರ ಯಾವುದೇ ವೆಚ್ಚವನ್ನು ಒಳಗೊಳ್ಳುತ್ತದೆ;

(ಇ) "ನಮೂನೆ" ಎಂದರೆ, ಈ ನಿಯಮಗಳಿಗೆ ಸೇರಿಸಲಾದ ನಮೂನೆ

(ಎಫ್) "ಸ್ಕೀಮುಗಳು" ಎಂದರೆ, ಅಧಿನಿಯಮದ 2ನೇ ಪ್ರಕರಣದ (ಕೆ) ಉಪ-ಪ್ರಕರಣದಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪಹಂಚಿಕೆ ಸ್ಕೀಮುಗಳು ಮತ್ತು ನೋಡಲ್ ಏಜೆನ್ಸಿಯು ತಿಳಿಯಪಡಿಸಿದಂತೆ ಅನುಸೂಚಿತ ಜಾತಿಗಳ ಉಪಹಂಚಿಕೆ ಅಥವಾ ಬುಡಕಟ್ಟು ಉಪ ಉಪಹಂಚಿಕೆಯಲ್ಲಿ ಸೇರಿಸಬೇಕೆಂದು ಪ್ರಸ್ತಾಪಿಸಿರುವ ಅಂಥ ಸ್ಕೀಮುಗಳನ್ನು ಸಹ ಒಳಗೊಳ್ಳತಕ್ಕದ್ದು;

(ಜಿ) *"ಅನುಸೂಚಿತ ಜಾತಿಗಳ ಅನುಸೂಚಿತ ಪಂಗಡಗಳ ವಾಸಸ್ಥಳ" ಎಂದರೆ, ಎಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು* ಅಥವಾ ಅನುಸೂಚಿತ ಜಾತಿಗಳ ಹಾಗೂ ಅನುಸೂಚಿತ ಪಂಗಡಗಳ ಸಂಯೋಜಿತ ಜನಸಂಖ್ಯೆಯು ಆ ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಅತೀ ಹೆಚ್ಚಿನ ಶೇಕಡ ಪ್ರಮಾಣವನ್ನು ಹೊಂದಿರುತ್ತದೆಯೋ ಆ ವಾಸಸ್ಥಳ.

2. ಈ ನಿಯಮಗಳಲ್ಲಿ ಪರಿಭಾಷಿಸಿಲ್ಲದ ಮತ್ತು ಅಧಿನಿಯಮದಲ್ಲಿ ಪರಿಭಾಷಿಸಿದ ಎಲ್ಲ ಪದಗಳು, ವ್ಯಾಕ್ಯಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿರುವಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು;

**3. ಸಮುದಾಯ/ ವಾಸಸ್ಥಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಟಾನಕ್ಕೆ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ವಾಸಸ್ಥಳಗಳ ಆಯ್ಕೆ ಈ ಕೆಳಕಂಡಂತೆ ಇರತಕ್ಕದ್ದು;**

1. *ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು* ಅಥವಾ ಅನುಸೂಚಿತ ಜಾತಿಗಳ ಹಾಗೂ ಅನುಸೂಚಿತ ಪಂಗಡಗಳ ಸಂಯೋಜಿತ ಜನಸಂಖ್ಯೆಯು ಶೇಕಡ 75 ಕ್ಕಿಂತ ಹೆಚ್ಚು ಇರುವ ವಾಸಸ್ಥಳಗಳು.

2. *ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗ*ಳು ಅಥವಾ ಅನುಸೂಚಿತ ಜಾತಿಗಳ ಹಾಗೂ ಅನುಸೂಚಿತ ಪಂಗಡಗಳ ಸಂಯೋಜಿತ ಜನಸಂಖ್ಯೆಯು ಶೇಕಡ 50 ರಿಂದ 75 ರಷ್ಟು ಇರುವ ವಾಸಸ್ಥಳಗಳು.
3. *ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗ*ಳು ಅಥವಾ ಅನುಸೂಚಿತ ಜಾತಿಗಳ ಹಾಗೂ ಅನುಸೂಚಿತ ಪಂಗಡಗಳ ಸಂಯೋಜಿತ ಜನಸಂಖ್ಯೆಯು ಶೇಕಡ 50 ಕ್ಕಿಂತ ಕಡಿಮೆ ಇರುವ ವಾಸಸ್ಥಳಗಳು.

**4. ಕಾಯ್ದೆಯ ಸೆಕ್ಷನ್ (2)ರನ್ವಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಅಂತರಗಳ ನಿರ್ಧರಣೆ;**

1) ರಾಜ್ಯದ ಸಾಮಾನ್ಯ ಸರಾಸರಿ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಸರಾಸರಿಯನ್ನು ಇಲಾಖೆಗಳಿಂದ ಸಂಗ್ರಹಿಸಲಾದ ದತ್ತಾಂಶ ಮಾಹಿತಿಯ ಜೊತೆಯಲ್ಲಿ ಅಧಿಕೃತ ಸಮೀಕ್ಷಾ ವರದಿಗಳು/ಅಧ್ಯಯನ ವರದಿಗಳು/ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಧಿಕೃತ ವರದಿಗಳಿಂದ ಸಂಗ್ರಹಿಸಿದ ದತ್ತಾಂಶಗಳ ಆಧಾರದಲ್ಲಿ ನೋಡಲ್ ಇಲಾಖೆಯು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ನಡುವೆ ಹಾಗೂ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಹಾಗೂ ರಾಜ್ಯದ ಸಾಮಾನ್ಯ ಜನರ ಅಭಿವೃದ್ಧಿಯಲ್ಲಿ ಇರುವ ಅಂತರವನ್ನು ಗುರುತಿಸಲು ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು.

ಅಭಿವೃದ್ಧಿಯ ಅಂತರಗಳನ್ನು ಗುರುತಿಸುವಾಗ ಲಭ್ಯವಿರುವ ದತ್ತಾಂಶಗಳು ಹಾಗೂ ಕಾಲಕಾಲಕ್ಕೆ ನಡೆಯುವ ಜನಗಣತಿಯ ದತ್ತಾಂಶಗಳೊಂದಿಗೆ ಈ ಕೆಳಗಿನ ಅಂಶಗಳನ್ನು ಪರಿಗಣಿಸತಕ್ಕದ್ದು .

ಎ) ಭೌಗೋಳಿಕ ಅಂಶಗಳು
ಬಿ) ಆರೋಗ್ಯಕ್ಕೆ ಸಂಬಂಧಿಸಿರುವ ಅಂಶಗಳು
ಸಿ) ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳು
ಡಿ) ವಸತಿ ಮತ್ತು ನೈರ್ಮಲ್ಯ
ಇ) ಮೂಲಭೂತ ಸೌಲಭ್ಯಗಳು
ಎಫ್) ಆರ್ಥಿಕ ಅಭಿವೃದ್ಧಿಯ ಅಂಶಗಳು ಮತ್ತು ಬಡತನ ರೇಖೆ

2) ಪ್ರತಿ ಇಲಾಖೆಯು ತನ್ನ ಕಾರ್ಯವ್ಯಾಪ್ತಿ ಮತ್ತು ಕಾರ್ಯಕ್ರಮಗಳಿಗೆ ಅನ್ವಯಿಸುವಂತೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಹಾಗೂ ರಾಜ್ಯದ ಸಾಮಾನ್ಯ ಜನರ ನಡುವಿನ ಅಭಿವೃದ್ಧಿಯ ಅಂತರಗಳನ್ನು ಗುರುತಿಸಿ ಅದಕ್ಕನುಗುಣವಾಗಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಯಡಿ ಯೋಜನೆಗಳನ್ನು ರೂಪಿಸತಕ್ಕದ್ದು. ಗುರುತಿಸಿದ ಅಭಿವೃದ್ಧಿ ಅಂತರಗಳನ್ನು ಪ್ರತಿ ಇಲಾಖೆಯು ನೋಡಲ್ ಇಲಾಖೆಗೆ ತಿಳಿಸತಕ್ಕದ್ದು.
3) ನೋಡಲ್ ಇಲಾಖೆಯು ಕ್ಷೇತ್ರಾಧಾರಿತ ಮೌಲ್ಯಮಾಪನ/ಪ್ರತಿಷ್ಠಿತ ಸಂಸ್ಥೆಗಳು ಅಥವಾ ಸಂಶೋಧನಾ ಸಂಸ್ಥೆಗಳಿಂದ ಕಾಲಕಾಲಕ್ಕೆ ಅಧ್ಯಯನವನ್ನು ಮಾಡಿಸಿ, ಅನುಸೂಚಿತ

ಜಾತಿಗಳ ಉಪಹಂಚಿಕೆ ಹಾಗೂ ಅನುಸೂಚಿತ ಬುಡಕಟ್ಟುಗಳ ಉಪಹಂಚಿಕೆಯಡಿ ಇರುವ ಪ್ರತಿ ಕಾರ್ಯಕ್ರಮಗಳಿಂದ ಉಂಟಾಗಿರುವ ಪರಿಣಾಮ ಹಾಗೂ ಅಭಿವೃದ್ಧಿಯ ಅಂತರವು ಕಡಿಮೆಯಾಗಿರುವ ಬಗ್ಗೆ ನೋಡಲ್ ಇಲಾಖೆಯು ಕ್ಷೇತ್ರಾಧಾರಿತ ಮೌಲ್ಯಮಾಪನ/ ಪ್ರತಿಷ್ಠಿತ ಸಂಸ್ಥೆಗಳು ಅಥವಾ ಸಂಶೋಧನಾ ಸಂಸ್ಥೆಗಳಿಂದ ಕಾಲಕಾಲಕ್ಕೆ ಅಧ್ಯಯನವನ್ನು ಮಾಡಿಸತಕ್ಕದ್ದು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಮಹಿಳೆಯರು ಮತ್ತು ಅತ್ಯಂತ ಹಿಂದುಳಿದ ಸಾಮಾಜಿಕ ಉಪಗುಂಪುಗಳ ಮೇಲೆ ಆಗಿರುವ ಪರಿಣಾಮದ ಅಧ್ಯಯನದ ಬಗ್ಗೆ ವಿಶೇಷ ಆದ್ಯತೆಯನ್ನು ನೀಡತಕ್ಕದ್ದು. ನೋಡಲ್ ಇಲಾಖೆಯು ಸಾಮಾಜಿಕ ಉಪಗುಂಪುಗಳ ಪ್ರತ್ಯೇಕ ದತ್ತಾಂಶಗಳನ್ನು ಹೊಂದಿರತಕ್ಕದ್ದು.

4) ಸಂಗ್ರಹಿಸಲಾದ ದತ್ತಾಂಶಗಳ ಆಧಾರದಲ್ಲಿ ಅಭಿವೃದ್ಧಿಯ ಅಂತರದ ಬಗ್ಗೆ ನೋಡಲ್ ಇಲಾಖೆಯು ವರದಿ ಸಿದ್ಧಪಡಿಸಿ, ಅಭಿವೃದ್ಧಿ ಅಂತರವನ್ನು ಕಡಿಮೆ ಮಾಡಲು ಅಗತ್ಯವಿರುವ ನೀತಿ–ನಿಯಮಗಳ ರಚನೆ ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ನೋಡಲ್ ಏಜೆನ್ಸಿ ಮತ್ತು ರಾಜ್ಯಪರಿಷತ್‌ನ ಮುಂದೆ ವರದಿಯನ್ನು ಮಂಡಿಸತಕ್ಕದ್ದು.

**5. ಸೆಕ್ಷನ್ 3 (6)ರ ಅನ್ವಯ ರಾಜ್ಯಪರಿಷತ್‌ನ ಸಭೆ ಮತ್ತು ಇತರ ಕಾರ್ಯಗಳು;**

1) ಅಧ್ಯಕ್ಷರು ನಿರ್ಧರಿಸಿರುವ ಸ್ಥಳ ಮತ್ತು ಸಮಯದಲ್ಲಿ ರಾಜ್ಯ ಪರಿಷತ್ತು, ಕನಿಷ್ಠಪಕ್ಷ ವರ್ಷಕ್ಕೆ ಎರಡು ಬಾರಿ ಸಭೆ ಸೇರತಕ್ಕದ್ದು.

2) ಆಯಾ ಇಲಾಖೆಗಳು ಆಯಾ ಆರ್ಥಿಕ ವರ್ಷದ ಉಪಹಂಚಿಕೆಗೆ ಅನುಗುಣವಾಗಿ ಸಿದ್ಧಪಡಿಸಿದ ವಾರ್ಷಿಕ ಕ್ರಿಯಾಯೋಜನೆ ಹಾಗೂ ನೋಡಲ್ ಏಜೆನ್ಸಿ ಶಿಫಾರಸ್ಸುಗಳನ್ನು ಪರಿಶೀಲಿಸಿ ಅನುಮೋದಿಸಲು ಹಾಗೂ ಆಯಾ ಇಲಾಖೆಗಳ ಕಾರ್ಯ ನಿರ್ವಹಣೆಯ ಪ್ರಗತಿಯನ್ನು ಪರಿಶೀಲಿಸಲು ರಾಜ್ಯ ಪರಿಷತ್ ಸಭೆ ಸೇರತಕ್ಕದ್ದು.

3) ರಾಜ್ಯ ಪರಿಷತ್‌ನಿಂದ ಅನುಮೋದಿತಗೊಂಡ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಅನುಸೂಚಿತ ಬುಡಕಟ್ಟು ಉಪಹಂಚಿಕೆಯ ಕಾರ್ಯಕ್ರಮಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಪಡೆಯಲಾಗಿದೆ ಎಂದು ಭಾವಿಸತಕ್ಕದ್ದು. ರಾಜ್ಯ ಪರಿಷತ್‌ನ ಅನುಮೋದನೆ ಪಡೆದ ತಕ್ಷಣ ಆಯಾ ಇಲಾಖೆಗಳು ತಮ್ಮ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡತಕ್ಕದ್ದು.

**6) ರಾಜ್ಯ ಅಭಿವೃದ್ಧಿ ಪರಿಷತ್‌ಗೆ ಸದಸ್ಯರ ನಾಮನಿರ್ದೇಶನ, ಸದಸ್ಯತ್ವ ರದ್ಧುಪಡಿಸುವುದು ಹಾಗೂ ಅವರ ಭತ್ಯೆಗಳು.**

1) ಸರ್ಕಾರವು, ಅನುಸೂಚಿತ ಜಾತಿ/ಅನುಸೂಚಿತ ಪಂಗಡಕ್ಕೆ ಸೇರಿದ ರಾಜ್ಯ ವಿಧಾನಸಭೆ, ರಾಜ್ಯ ವಿಧಾನ ಪರಿಷತ್ತು ಮತ್ತು ಸಂಸತ್ತಿನ ಸದಸ್ಯರಿಂದ ಆಯ್ದ ಐದು ಸದಸ್ಯರನ್ನು 30 ತಿಂಗಳ ಅವಧಿಗೆ ರಾಜ್ಯ ಪರಿಷತ್ತಿಗೆ ನಾಮನಿರ್ದೇಶಿಸುವುದು.
2) ರಾಜ್ಯ ವಿಧಾನಸಭೆ, ರಾಜ್ಯ ವಿಧಾನ ಪರಿಷತ್ತು ಮತ್ತು ಸಂಸತ್ತಿನ ಸದಸ್ಯತ್ವದ ಅವಧಿ ಕೊನೆಗೊಂಡ ತಕ್ಷಣ ನಾಮನಿರ್ದೇಶಿತ ಸದಸ್ಯರ ರಾಜ್ಯಪರಿಷತ್ ಸದಸ್ಯತ್ವವು ಕೊನೆಗೊಳ್ಳುತ್ತದೆ.
3) ಅವರು ರಾಜ್ಯ ಪರಿಷತ್ತಿನ ಸಭೆಗಳಿಗೆ ಹಾಜರಾಗುವಾಗ ರಾಜ್ಯ ಶಾಸಕಾಂಗ ಸಮಿತಿಗಳ ಸದಸ್ಯರುಗಳು ಪಡೆಯುವ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಗಳಿಗೆ ನಾಮನಿರ್ದೇಶಿತ ಸದಸ್ಯರು ಅರ್ಹರಾಗಿರುವರು.
4) ನಾಮ ನಿರ್ದೇಶಿತ ಸದಸ್ಯರ ಸದಸ್ಯತ್ವವು 30 ತಿಂಗಳ ಅವಧಿ ಅಥವಾ ಸರ್ಕಾರದಿಂದ ಹೊಸ ಸಮಿತಿಯ ರಚನೆಯಾಗುವ ತನಕದ ಅವಧಿಯಲ್ಲಿ ಯಾವುದು ನಂತರವೋ ಆ ಅವಧಿಗೆ ಮುಕ್ತಾಯಗೊಳ್ಳುವುದು.

**7) ರಾಜ್ಯದ ಒಟ್ಟು ಯೋಜನಾ ವೆಚ್ಚದಿಂದ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಾಗಿ ನಿಧಿಗಳನ್ನು ಮೀಸಲಿರಿಸುವುದು (13ನೇ ಪ್ರಕರಣ)**

1) ಸರ್ಕಾರವು, ರಾಜ್ಯದ ಒಟ್ಟು ಹಂಚಿಕೆ ಮಾಡಬಹುದಾದ ಆಯವ್ಯಯದ ಪೈಕಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಯು ಇತ್ತೀಚಿನ ಜನಗಣತಿ ಅಂಕಿಅಂಶಗಳಿಗನುಸಾರ ರಾಜ್ಯದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯ ಶೇಕಡಾವಾರುಗಿಂತ ಕಡಿಮೆ ಇರತಕ್ಕದ್ದಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

2)ಪ್ರತಿ ಆರ್ಥಿಕ ವರ್ಷದಲ್ಲಿ ಈ ಎರಡು ಉಪಹಂಚಿಕೆಗಳಿಗೆ ನಿಗದಿ ಮಾಡುವ ತಾತ್ಕಾಲಿಕ ಇಡುಗಂಟಿನ ಬಗ್ಗೆ ಹಾಗೂ ಹಿಂದಿನ ಆರ್ಥಿಕ ವರ್ಷದಲ್ಲಿ ಬಳಕೆಯಾಗದೇ ಉಳಿದ ಅನುದಾನದ ಪ್ರತ್ಯೇಕ ಮಾಹಿತಿಯೊಂದಿಗೆ ಆರ್ಥಿಕ ಇಲಾಖೆಯು ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಮರುಹಂಚಿಕೆ ಮಾಡುವ ಸಲುವಾಗಿ ನೋಡಲ್ ಇಲಾಖೆಗೆ ಮಾಹಿತಿಯನ್ನು ನೀಡುವುದು. ಆದರೆ ಈ ಮೊತ್ತವು ಅಂತಿಮವಾಗಿ ಹಂಚಿಕೆ ಮಾಡಬಹುದಾದ ಆಯವ್ಯಯ ಮತ್ತು ಹಿಂದಿನ ಆರ್ಥಿಕ ವರ್ಷದಲ್ಲಿ ಯಾವುದಾದರೂ ಬಳಕೆಯಾಗದ ಅನುದಾನವಿದ್ದಲ್ಲಿ ಆ ಮೊತ್ತಕ್ಕೆ ಒಳಪಟ್ಟಿರುತ್ತದೆ. ಇಡುಗಂಟಿನ ಮಾಹಿತಿ ನೀಡುವಾಗ ಬಳಕೆಯಾಗದೇ ಉಳಿದ ಮೊತ್ತದ ಮಾಹಿತಿಯನ್ನು ಪ್ರತ್ಯೇಕವಾಗಿ ತೋರಿಸುವುದು.

3)ಬಳಕೆಯಾಗದೇ ಉಳಿದ ಮೊತ್ತದಲ್ಲಿ 2/3 ಭಾಗದ ಅನುದಾನವನ್ನು ಆಯಾ ಇಲಾಖೆಗಳಿಗೆ ಹಾಗೂ ಉಳಿದ 1/3 ಭಾಗದ ಅನುದಾನವನ್ನು ಪರಿಶಿಷ್ಟ ಜಾತಿಯವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಸಮಾಜ ಕಲ್ಯಾಣ ಇಲಾಖೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ನೀಡುವುದು. ಬಳಕೆಯಾಗದೇ ಉಳಿದ ಅನುದಾನವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರೆಸಲು ಅವಕಾಶ ಇಲ್ಲದಿರುವ ಕಾರಣ ಬಳಕೆಯಾಗದೇ ಉಳಿದ ಮೊತ್ತವನ್ನು ಹಂಚಿಕೆ ಮಾಡಿದ ಆರ್ಥಿಕ ವರ್ಷದಲ್ಲಿ ಆದ್ಯತೆ ಮೇರೆಗೆ ವಿನಿಯೋಗಿಸತಕ್ಕದ್ದು.

**8. ವಿವಿಧ ಇಲಾಖೆಗಳಿಗೆ ಉಪಹಂಚಿಕೆಯ ಬಗ್ಗೆ ಮಾಹಿತಿ ಒದಗಿಸಲು ನೋಡಲ್ ಇಲಾಖೆಯು ಕೈಗೊಳ್ಳಬೇಕಾದ ಕ್ರಮ. (14ನೇ ಪ್ರಕರಣ):**

**1)** ಆರ್ಥಿಕ ಇಲಾಖೆಯಿಂದ ಉಪಹಂಚಿಕೆಯ ಬಗ್ಗೆ ಮಾಹಿತಿಯನ್ನು ಪಡೆದ ಬಳಿಕ ನೋಡಲ್ ಇಲಾಖೆಯು ವಿವಿಧ ಅಭಿವೃದ್ಧಿ ಇಲಾಖೆಗಳು ಮತ್ತು ಯೋಜನಾ ಇಲಾಖೆಯ ಸಹಯೋಗದೊಂದಿಗೆ ಅಭಿವೃದ್ಧಿ ಅಂತರ ಮತ್ತು ಅಂತರವನ್ನು ಕಡಿಮೆಗೊಳಿಸುವ ಹಾಗೂ ನಿವಾರಿಸುವುದನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಇಲಾಖೆಗೆ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಅನುಸೂಚಿತ ಬುಡಕಟ್ಟು ಉಪಹಂಚಿಕೆಯಡಿ ಕಾರ್ಯಕ್ರಮವಾರು ಅನುದಾನವನ್ನು ಹಂಚಿಕೆ ಮಾಡತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿಯನ್ನು ನೀಡುವ ಪೂರ್ವದಲ್ಲಿ ನೋಡಲ್ ಇಲಾಖೆಯು ನೋಡಲ್ ಏಜೆನ್ಸಿಯ ಅನುಮೋದನೆ ಪಡೆಯತಕ್ಕದ್ದು.

**2) ನೋಡಲ್ ಇಲಾಖೆ ಮತ್ತು ನೋಡಲ್ ಏಜೆನ್ಸಿಯು ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡುವಾಗ, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರತಕ್ಕದ್ದು:**

(ಎ) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ರೂಪಿಸುವ ಕಾರ್ಯಕ್ರಮಗಳು ರಾಜ್ಯದ ಆದ್ಯತೆಯ ಕಾರ್ಯಕ್ರಮಗಳಾಗಿರಬೇಕು. ಮತ್ತು ನೀಡುವ ಸೌಲಭ್ಯಗಳ ಪ್ರಮಾಣ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಂಖ್ಯೆಯನ್ನು ಒಳಗೊಂಡಿರುವುದು.

(ಬಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವ್ಯಕ್ತಿಗಳಿಗೆ, ಕುಟುಂಬಗಳಿಗೆ, ಸಾಮಾಜಿಕ ಗುಂಪುಗಳಿಗೆ, ವಾಸಸ್ಥಳಗಳಿಗೆ ಹಾಗೂ ಸಂಸ್ಥೆಗಳಿಗೆ ನೇರ ಹಾಗೂ ನಿರ್ಣಯಿಸಬಹುದಾದ ಪ್ರಯೋಜನಗಳನ್ನು ಖಾತರಿಪಡಿಸಬಹುದಾದ ಯೋಜನೆಗಳನ್ನು ಇಲಾಖೆಗಳು ರೂಪಿಸುವುದು.

(ಸಿ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳ ಅವಶ್ಯಕತೆಗಳು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಅತ್ಯಂತ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಪ್ರಮುಖವಾಗಿದ್ದು, ಅಂತಹ ಪ್ರದೇಶಗಳು ಮತ್ತು ಸಮುದಾಯದ ಸಮಾನತೆ ಮತ್ತು ಅಭಿವೃದ್ಧಿಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಆದ್ಯತೆ ನೀಡುವುದು. ನೋಡಲ್ ಇಲಾಖೆಯ ಇಂತಹ ಪ್ರದೇಶಗಳು ಮತ್ತು ಅತ್ಯಂತ ಹಿಂದುಳಿದ ಸಾಮಾಜಿಕ ಗುಂಪುಗಳನ್ನು ಗುರುತಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿಯನ್ನು ನೀಡುವುದು.

(ಡಿ) ಹಿಂದಿನ ಆರ್ಥಿಕ ವರ್ಷದಲ್ಲಿ ಅಭಿವೃದ್ಧಿಕಾರ್ಯಗಳಲ್ಲಿನ ಅಂತರಗಳನ್ನು ಕಡಿಮೆ ಮಾಡುವಲ್ಲಿ ನಿರ್ಣಾಯಾತ್ಮಕ ಫಲಿತಾಂಶಗಳ ಆಧಾರದ ಮೇಲೆ ನಿರ್ಧರಿಸಲಾದಂತೆ ಹಿಂದಿನ ಆರ್ಥಿಕ ವರ್ಷದಲ್ಲಿ ಇಲಾಖೆಯ ಉಪ–ಹಂಚಿಕೆಗಳ ಅಡಿಯಲ್ಲಿ ಕಾರ್ಯನಿರ್ವಹಣೆ ಮತ್ತು ಉಪ–ಹಂಚಿಕೆಗಳ ಅಡಿಯಲ್ಲಿ ಹಂಚಲಾದ ಅನುದಾನದ ಪಾರದರ್ಶಕ ಮತ್ತು ಜವಾಬ್ದಾರಿಯುತ ಬಳಕೆ.

(ಇ) ಯಾವುದೇ ಅಪೂರ್ಣ ಯೋಜನೆ/ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಅನುದಾನ ಹಂಚಿಕೆ.

(ಎಫ್) ಪ್ರತಿ ಕಾರ್ಯಕ್ರಮಕ್ಕೆ ಅನುದಾನ ಹಂಚಿಕೆ ಮಾಡುವಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಮಾತ್ರ ಪರಿಗಣಿಸದೇ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗೆ ಸಹಕಾರಿಯಾಗುವ ಅವರ ಅಗತ್ಯತೆ ಮತ್ತು ಅವಶ್ಯಕತೆಗಳನ್ನು ಪರಿಗಣಿಸುವುದು. ಪ್ರತಿ ಇಲಾಖೆಯಲ್ಲೂ ಒಂದು ಕಾರ್ಯಕ್ರಮದಲ್ಲಿ ಹೆಚ್ಚಿನ ಅನುದಾನ ಮತ್ತು ಇನ್ನೊಂದು ಕಾರ್ಯಕ್ರಮದಲ್ಲಿ ಕಡಿಮೆ ಅನುದಾನ ಹಂಚಿಕೆ ಮಾಡುವ ಸಾಧ್ಯತೆ ಇರುತ್ತದೆ.

**9. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ಸ್ಕೀಮುಗಳನ್ನು ಇಲಾಖೆಗಳು ಗುರುತಿಸುವುದು (15ನೇ ಮತ್ತು 17ನೇ ಪ್ರಕರಣ):**

1). ಪ್ರತಿಯೊಂದು ಇಲಾಖೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ನೇರವಾಗಿ ಪ್ರಯೋಜನವಾಗುವಂತಹ ಹೊಸ ಕಾರ್ಯಕ್ರಮಗಳನ್ನೊಳಗೊಂಡಂತೆ ಕಾರ್ಯಕ್ರಮಗಳನ್ನು ಗುರುತಿಸುವುದು.

2). ಉಪ–ನಿಯಮ (1)ರ ಮೇರೆಗೆ ಯೋಜನೆಗಳನ್ನು ಗುರುತಿಸುವಾಗ ಪ್ರತಿಯೊಂದು ಇಲಾಖೆಯು ಈ ಮುಂದಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಎ) ಅಭಿವೃದ್ಧಿ ಕಾರ್ಯಗಳಲ್ಲಿನ ಅಂತರಗಳನ್ನು ಕಡಿಮೆ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳು, ಕುಟುಂಬ ಸದಸ್ಯರು, ವಾಸಸ್ಥಳಗಳು ಮತ್ತು ಸಂಸ್ಥೆಗಳಿಗೆ ನೇರವಾಗಿ ಮತ್ತು ಪ್ರಮಾಣಕ್ಕೆ ಅನುಸಾರವಾಗಿ ನಿರ್ಣಯಿಸಬಹುದಾದಂಥ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವುದು.

(ಬಿ) ಶಿಕ್ಷಣ, ಉನ್ನತ ದರ್ಜೆಯ ವಸತಿ ಶಾಲೆಗಳು, ಉನ್ನತ–ಶಿಕ್ಷಣ, ವೃತ್ತಿಪರ ಮತ್ತು ಇತರ ಉನ್ನತ ಶೈಕ್ಷಣಿಕ ಮತ್ತು ತಾಂತ್ರಿಕ ಸಂಸ್ಥೆಗಳ ಪ್ರವೇಶಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಆಯ್ಕೆಗಳಿಗಾಗಿ ಪರಿಹಾರಕ ಮತ್ತು ಕೌಶಲ್ಯದ ಅಭಿವೃದ್ಧಿಗೆ ಆದ್ಯತೆ ನೀಡುವುದು.

(ಸಿ) ಆರೋಗ್ಯ ಪಾಲನೆ, ಔಷಧೋಪಚಾರ, ಆರೋಗ್ಯ ವಿಮೆ, ಜನಜಾಗೃತಿ ಮೂಡಿಸುವುದು ಇತ್ಯಾದಿ.

(ಡಿ) ಸಮುದಾಯ ನೈರ್ಮಲ್ಯ ಒಳಗೊಂಡಂತೆ ವಸತಿ ಮತ್ತು ನೈರ್ಮಲ್ಯ

(ಇ) ಭೂಮಿ ರಹಿತರಿಗೆ ಭೂಮಿ ಒದಗಿಸುವುದು, ನೀರಾವರಿ ಸೌಲಭ್ಯ ಕಲ್ಪಿಸುವುದು, ವಾಣಿಜ್ಯೋದ್ಯಮದ ಅಭಿವೃದ್ಧಿ ಇತ್ಯಾದಿ.

(ಎಫ್) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವಾಸಸ್ಥಳಗಳು, ಸಾಮಾಜಿಕ ಭದ್ರತೆ ಮತ್ತು ಘನತೆಗಾಗಿ ಎಲ್ಲಾ ಅವಶ್ಯಕ ಸೌಕರ್ಯಗಳನ್ನು ಒಳಗೊಂಡಂತೆ ಅಭಿವೃದ್ಧಿಗೆ ಆದ್ಯತೆ ನೀಡುವುದು.

(ಜಿ) ಅಭಿವೃದ್ಧಿಯಲ್ಲಿ ಅಂತರವನ್ನು ಗಣನೀಯವಾಗಿ ಕಡಿಮೆ ಮಾಡಲು ಸಹಕಾರಿಯಾಗುವಂತಹ ಯಾವುದೇ ಕಾರ್ಯಕ್ರಮಗಳು.

(ಹೆಚ್) ಸಮಾನತೆಯನ್ನು ಖಚಿತಪಡಿಸಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಮಹಿಳೆಯರಿಗೆ, ವಿಕಲಚೇತನ ವ್ಯಕ್ತಿಗಳಿಗೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿ ಅತ್ಯಂತ ಹಿಂದುಳಿದ ಗುಂಪುಗಳಿಗೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಗಣನೀಯವಾಗಿರುವ ಹಿಂದುಳಿದ ಪ್ರದೇಶಗಳಿಗೆ ಯುಕ್ತ ಪಾಲನ್ನು ನೀಡಬೇಕು.

**3 ಪರಿಶಿಷ್ಟ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಯಡಿ ಫಲಾನುಭವಿಗಳ ಆಯ್ಕೆ:**

ಪರಿಶಿಷ್ಟ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಯಡಿ ಕಾರ್ಯಕ್ರಮಗಳ ಸೌಲಭ್ಯ ಪಡೆಯಲು ಫಲಾನುಭವಿಗಳು ಪ್ರತಿಬಾರಿ ಅರ್ಜಿ ಸಲ್ಲಿಸುವುದನ್ನು ಕಡಿಮೆಗೊಳಿಸಲು ಮತ್ತು ಅರ್ಹ ಫಲಾನುಭವಿಗಳನ್ನು ಸಮರ್ಪಕವಾಗಿ ಆಯ್ಕೆ ಮಾಡಲು ಅನುಕೂಲವಾಗುವಂತೆ ಈ ಉಪಹಂಚಿಕೆಗಳಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಫಲಾನುಭವಿಗಳನ್ನು ಅರ್ಹತಾ ಮಾನದಂಡಗಳಿಗೊಳಪಟ್ಟು ಪಾರದರ್ಶಕವಾಗಿ ಆಯ್ಕೆ ಮಾಡಿ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಅಥವಾ ಹೆಚ್ಚಿನ ವರ್ಷಗಳಲ್ಲಿ ವಿತರಿಸುವುದು.

**ಫಲಾನುಭವಿಗಳ ಆಯ್ಕೆಯಲ್ಲಿ ತೆಗೆದುಕೊಳ್ಳಬೇಕಾದ ನಿರ್ದಿಷ್ಟ ಕ್ರಮಗಳು;**

i) ಪ್ರತಿಯೊಂದು ಇಲಾಖೆಯು ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸುವುದು

ii) ಅರ್ಜಿದಾರರ ಅರ್ಹತೆಯನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ವಿಧಾನಸಭಾ ಕ್ಷೇತ್ರವಾರು ಸಿದ್ದಪಡಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಫಲಾನುಭವಿಗಳ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸುವುದು.

iii) ಅರ್ಹ ಫಲಾನುಭವಿಗಳ ಪಟ್ಟಿಯನ್ನು ಆಯ್ಕೆಗಾಗಿ ಸಂಬಂಧಪಟ್ಟ ಆಯ್ಕೆಸಮಿತಿ ಮುಂದೆ ಮಂಡಿಸುವುದು ಮತ್ತು ಆಯ್ಕೆಪಟ್ಟಿಯನ್ನು ಪ್ರಕಟಿಸುವುದು.

iv) ಗುರುತಿಸಲಾದ ಅರ್ಹ ಫಲಾನುಭವಿಗಳ ಪಟ್ಟಿ ಪೂರ್ಣಗೊಂಡ ನಂತರ ಅವಶ್ಯಕತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಹೊಸ ಫಲಾನುಭವಿಗಳ ಪಟ್ಟಿಯನ್ನು ನಿಯಮಾನುಸಾರ ಸಿದ್ದಪಡಿಸುವುದು.

**10. ಸೆಕ್ಷನ್ (16) ರನ್ವಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳನ್ನು ಸಾಮಾನ್ಯ ಸ್ಕೀಮುಗಳ ವ್ಯಾಪ್ತಿಯಲ್ಲಿ ಒಳಪಡಿಸುವ ಹೊಣೆಗಾರಿಕೆ:**

ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಜೊತೆಗೆ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳನ್ನು ಅವರ ಅರ್ಹತೆಗನುಗುಣವಾಗಿ ಪ್ರಗತಿಯಲ್ಲಿರುವ ಸಾಮಾನ್ಯ ಸ್ಕೀಮ್‌ಗಳ ಮತ್ತು ಹೊಸ ಸ್ಕೀಮ್‌ಗಳ ವ್ಯಾಪ್ತಿಯಲ್ಲಿ ತರಲಾಗಿದೆ ಎಂಬುದನ್ನು ಇಲಾಖೆಗಳು ಖಚಿತಪಡಿಸಿಕೊಳ್ಳತಕ್ಕದ್ದು.

**11.ನೋಡಲ್ ಏಜೆನ್ಸಿಯ ಪರಿಶೀಲನೆಗಾಗಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಆಯವ್ಯಯ ಸಿದ್ಧಪಡಿಸಿ ಸಲ್ಲಿಸುವುದು.**

1) **ಕಾರ್ಯಕ್ರಮಗಳ ಆಯವ್ಯಯ ಸಿದ್ದಪಡಿಸುವ ಸಂಬಂಧ ನೋಡಲ್ ಇಲಾಖೆ ಮತ್ತು ಇತರೆ ಇಲಾಖೆಗಳು ಕೆಳಕಂಡ ಕ್ರಮಗಳನ್ನು ಅನುಸರಿಸುವುದು.**

ಎ) ನೋಡಲ್ ಇಲಾಖೆಯು (ಎ) ಆಯವ್ಯಯ ಪ್ರಸ್ತಾವನೆ ಅಂತಿಮಗೊಳಿಸುವ ಪೂರ್ವದಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿವಿಧ ಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸುವುದು

ಬಿ) ಅಭಿವೃದ್ಧಿ ಇಲಾಖೆಗಳ ಪ್ರತಿನಿಧಿಗಳನ್ನು ಕೂಡ ಆಯವ್ಯಯ ಪೂರ್ವಭಾವಿ ಸಭೆಗೆ ಅಹ್ವಾನಿಸಿ ಚರ್ಚಿಸುವುದು.

ಸಿ) ಜಿಲ್ಲಾ ಮೇಲ್ವಿಚಾರಣಾ ಸಮಿತಿಯಿಂದ ಪ್ರಸ್ತಾವನೆ/ಸಲಹೆಗಳನ್ನು ಪಡೆಯುವುದು. ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಜಿಲ್ಲಾಮಟ್ಟದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಪ್ರಸ್ತಾವನೆ/ಸಲಹೆಗಳನ್ನು ನೋಡಲ್ ಇಲಾಖೆಗೆ ಸಲ್ಲಿಸುವುದು.

2) ಇಲಾಖೆಗಳು ಕಾರ್ಯಕ್ರಮವಾರು ಆಯವ್ಯಯದ ಕರಡು ಪ್ರಸ್ತಾವನೆಯನ್ನು ಅನುಸೂಚಿತ ಜಾತಿಗಳ ಉಪಹಂಚಿಕೆಗೆ ಸಂಬಂಧಿಸಿದಂತೆ ಈ ನಿಯಮಕ್ಕೆ ಲಗತ್ತಿಸಿದ ನಮೂನೆ-1 ರಲ್ಲಿ ಮತ್ತು ಬುಡಕಟ್ಟು ಉಪಹಂಚಿಕೆಗೆ ಸಂಬಂಧಿಸಿದಂತೆ ನಮೂನೆ-3 ರಲ್ಲಿ ನೋಡಲ್ ಇಲಾಖೆಗೆ ಸಲ್ಲಿಸುವುದು. ಸದರಿ ಪ್ರಸ್ತಾವನೆಯು ಅಧಿನಿಯಮ ಮತ್ತು ನಿಯಮಗಳನ್ವಯ ಸಿದ್ದಪಡಿಸಲಾಗಿದೆಯೇ ಎಂಬುದನ್ನು ನೋಡಲ್ ಇಲಾಖೆಯು ಪರಿಶೀಲಿಸಿ ಯಾವುದೇ ಪರಿಷ್ಕರಣೆ ಇದ್ದಲ್ಲಿ ಇಲಾಖೆಗೆ ಹಿಂದಿರುಗಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಪಡೆದು ರಾಜ್ಯ ಪರಿಷತ್‌ಗೆ ಶಿಫಾರಸ್ಸು ಮಾಡಲು ನೋಡಲ್ ಏಜೆನ್ಸಿಗೆ ಮಂಡಿಸುವುದು.

12. **ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಯ ಪ್ರಸ್ತಾವನೆಗಳ ಪರಿಶೀಲನೆ ಹಾಗೂ ಶಿಫಾರಸ್ಸುಗಳೊಂದಿಗೆ ರಾಜ್ಯ ಪರಿಷತ್‌ಗೆ ಮಂಡಿಸುವುದು.(ಸೆಕ್ಷನ್ 18 ಮತ್ತು 19) ರನ್ವಯ;**

1. ವಿವಿಧ ಅಭಿವೃದ್ಧಿ ಇಲಾಖೆಗಳು ಸಲ್ಲಿಸಿರುವ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳ ಕರಡು ಆಯವ್ಯಯ ಪ್ರಸ್ತಾವನೆಗಳನ್ನು ನೋಡಲ್ ಏಜೆನ್ಸಿಯು ನೋಡಲ್ ಇಲಾಖೆಯ ಸಹಯೋಗದೊಂದಿಗೆ ಪರಿಶೀಲಿಸಿ ಪ್ರಸ್ತಾವನೆಯು ಅಧಿನಿಯಮ ಮತ್ತು ನಿಯಮಗಳನ್ವಯ ಸಿದ್ದಪಡಿಸಲಾಗಿದೆಯೇ ಎಂಬುದನ್ನು ಆಯವ್ಯಯ

ಪೂರ್ವಭಾವಿ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಪರಿಶೀಲಿಸುವುದು. ನೋಡಲ್ ಏಜೆನ್ಸಿಯು ಯಾವುದೇ ನ್ಯೂನತೆಗಳನ್ನು ಗಮನಿಸಿದಲ್ಲಿ, ಸಂಬಂಧಿಸಿದ ಇಲಾಖೆಗಳಿಗೆ ಪರಿಷ್ಕರಿಸಿ ಮರು ಸಲ್ಲಿಸಲು ಸೂಚಿಸುವುದು.

2. ನೋಡಲ್ ಏಜೆನ್ಸಿಯ ಅನುಮೋದಿಸಿದ ಕಾರ್ಯಕ್ರಮವಾರು ಆಯವ್ಯಯ ಪ್ರಸ್ತಾವನೆಗಳನ್ನು ವಿಧಾನಮಂಡಲದಲ್ಲಿ ಮಂಡಿಸಲಾಗುವ ರಾಜ್ಯದ ವಾರ್ಷಿಕ ಆಯವ್ಯಯದಲ್ಲಿ ಸಂಬಂಧಪಟ್ಟ ಇಲಾಖೆಗಳ ಅನುದಾನ ಬೇಡಿಕೆಯಲ್ಲಿ ಸೇರಿಸುವ ಸಲುವಾಗಿ ಆರ್ಥಿಕ ಇಲಾಖೆಗೆ ಸಲ್ಲಿಸುವುದು. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಅನುದಾನದ ಬೇಡಿಕೆಗಳನ್ನು ಪ್ರತಿ ಇಲಾಖೆಗೆ ಪ್ರತ್ಯೇಕ ಲೆಕ್ಕಶೀರ್ಷಿಕೆಗಳಡಿ ಒದಗಿಸಿ ಪ್ರತ್ಯೇಕವಾಗಿ ಆಯವ್ಯಯ ಸಂಚಿಕೆಯಲ್ಲಿ ಮಂಡಿಸುವುದು.
3. ಅನುಷ್ಠಾನ ಇಲಾಖೆಗಳು ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಒದಗಿಸಿರುವ ಅನುದಾನಕ್ಕೆ ಕಾರ್ಯಕ್ರಮವಾರು ವಿವರಗಳನ್ನು ಈ ನಿಯಮಕ್ಕೆ ಲಗತ್ತಿಸಿರುವ ನಮೂನೆ-2 (SCSA) ಮತ್ತು ನಮೂನೆ-4 (TSA) ರಲ್ಲಿ ನೋಡಲ್ ಇಲಾಖೆಗೆ ಸಲ್ಲಿಸುವುದು.
4. ತದನಂತರ ನೋಡಲ್ ಏಜೆನ್ಸಿಯು ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಹೊಸ ಕಾರ್ಯಕ್ರಮಗಳು ಇದ್ದಲ್ಲಿ ಅವುಗಳನ್ನೊಳಗೊಂಡಂತೆ ಕಾರ್ಯಕ್ರಮವಾರು ಕ್ರಿಯಾಯೋಜನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯ ಪರಿಷತ್‌ನ ಅನುಮೋದನೆಗೆ ಶಿಫಾರಸ್ಸು ಮಾಡುವುದು.
5. ನೋಡಲ್ ಏಜೆನ್ಸಿಯು ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಪ್ರತಿ ಯೋಜನೆಯ ಸಹಾಯಧನ ಮೊತ್ತ ಇತ್ಯಾದಿಗಳನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಶಿಫಾರಸ್ಸುಗಳೊಂದಿಗೆ ರಾಜ್ಯ ಪರಿಷತ್‌ನ ಅನುಮೋದನೆಗೆ ಶಿಫಾರಸ್ಸು ಮಾಡುವುದು.
6. ಕ್ರಿಯಾ ಯೋಜನೆಗೆ ರಾಜ್ಯ ಪರಿಷತ್‌ನ ಅನುಮೋದನೆಯನ್ನು ಪಡೆದ ಬಳಿಕ ಸಂಬಂಧಿಸಿದ ಇಲಾಖೆಯು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಯೋಜನೆ ಮತ್ತು ಸಹಾಯಧನದ ವಿವರದ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸುವುದು. ಅನುಮೋದಿತ ಕಾರ್ಯಕ್ರಮಗಳಲ್ಲಿ ಯಾವುದಾದರೂ ಬದಲಾವಣೆ, ಪರಿಷ್ಕರಣೆ ಅಥವಾ ಮರುಹಂಚಿಕೆಯ ಅಗತ್ಯವಿದ್ದಲ್ಲಿ ಸೂಕ್ತ ಸಮರ್ಥನೆಯೊಂದಿಗೆ ನೋಡಲ್ ಏಜೆನ್ಸಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.
7. ರಾಜ್ಯ ಪರಿಷತ್ ಅನುಮೋದಿತ ಕಾರ್ಯಕ್ರಮವಾರು ಕ್ರಿಯಾಯೋಜನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಎಲ್ಲಾ ಅಭಿವೃದ್ಧಿ ಇಲಾಖೆಗಳು ಹಾಗೂ ನೋಡಲ್ ಇಲಾಖೆಯು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಪರಿಷತ್ ಸೂಚಿಸುವ ಇತರೆ ಕೆಲಸಗಳನ್ನು ನೋಡಲ್ ಏಜೆನ್ಸಿ ನಿರ್ವಹಿಸುವುದು.

## 13. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಅನುದಾನ

### ಬಿಡುಗಡೆ ಆದೇಶಗಳು;

1. ಆಯವ್ಯಯ ಸಂಪುಟಗಳು ಲಭ್ಯವಾದ ಕೂಡಲೇ ಸಂಬಂಧಪಟ್ಟ ಇಲಾಖೆಗಳು ಹಿಂದಿನ ಆರ್ಥಿಕ ವರ್ಷದಲ್ಲಿ ರಾಜ್ಯ ಪರಿಷತ್‌ನಲ್ಲಿ ಅನುಮೋದನೆಗೊಂಡ ಮುಂದುವರೆದ ಕಾರ್ಯಕ್ರಮಗಳಿಗೆ 1/4 ಭಾಗ ಅನುದಾನವನ್ನು ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡುವುದು. ರಾಜ್ಯ ಪರಿಷತ್‌ನಲ್ಲಿ ಅನುಮೋದನೆಗೊಂಡ ಬಳಿಕ ಉಳಿದ

ಅನುದಾನವನ್ನು ಪ್ರದತ್ತ ಆರ್ಥಿಕ ಅಧಿಕಾರದನ್ವಯ ಪ್ರತಿ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡುವುದು.

2. ಆಯಾ ಇಲಾಖೆಯ ಮುಖ್ಯಸ್ಥರು ರಾಜ್ಯವಲಯದ ಅನುದಾನವನ್ನು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಅಥವಾ ಅನುಷ್ಠಾನ ಅಧಿಕಾರಿಗಳಿಗೆ ಯಾವುದೇ ವಿಳಂಬವಿಲ್ಲದೇ ಬಿಡುಗಡೆ ಮಾಡುವುದು.

3. ಆಯವ್ಯಯ ಬಿಡುಗಡೆ ಆದೇಶವನ್ನು ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡುವುದು, ನೋಡಲ್ ಇಲಾಖೆಯ ಆಡಳಿತ ಮತ್ತು ತಾಂತ್ರಿಕ ನೆರವು ಘಟಕವು ನಿಗದಿತ ಕಾಲಮಿತಿಯೊಳಗೆ ಅನುದಾನ ಬಿಡುಗಡೆಯಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

14. **ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿತನ;**

1. ನೋಡಲ್ ಇಲಾಖೆಯು ಕೆಳಕಂಡ ವಿವರಗಳನ್ನು ನಿಗದಿತ ಅವಧಿಯಲ್ಲಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದು.

ಎ) ರಾಜ್ಯದ ಒಟ್ಟು ಆಯವ್ಯಯ, ಹಂಚಿಕೆ ಮಾಡಬಹುದಾದ ಆಯವ್ಯಯ ಮತ್ತು ಉಪಹಂಚಿಕೆಗಳು

ಬಿ) ಎಲ್ಲಾ ಅಭಿವೃದ್ಧಿ ಇಲಾಖೆಗಳ ಅನುಮೋದಿತ ಕಾರ್ಯಕ್ರಮಗಳ ವಿವರ

ಸಿ) ಮಾಸಿಕ ಪ್ರಗತಿ ವರದಿ ವಿವರಗಳು

**ಡಿ)**ಉಪಹಂಚಿಕೆಗಳಡಿ ಅನುಷ್ಠಾನವಾಗುವ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವರದಿಗಳು

2. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಅನುಷ್ಠಾನವಾಗುವ ಕಾರ್ಯಕ್ರಮಗಳ ಸಮರ್ಪಕ ಮೇಲ್ವಿಚಾರಣೆ ಮತ್ತು ಪರಿಣಾಮಕಾರಿ ನಿರ್ವಹಣೆಗಾಗಿ ನೋಡಲ್ ಇಲಾಖೆಯು ಒಂದು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಆನ್‌ಲೈನ್ ಪ್ರಗತಿ ವರದಿಯನ್ನು ಪಡೆಯಲು ಕ್ರಮಕೈಗೊಳ್ಳುವುದು.

3. ಪ್ರತಿಯೊಂದು ಇಲಾಖೆಗಳು ಮೇಲ್ಕಂಡ ಅಂಶಗಳ ಜೊತೆಗೆ ಕೆಳಕಂಡ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡುವುದು.

ಎ) ಉಪಹಂಚಿಕೆಗಳಡಿ ಕಾರ್ಯಕ್ರಮವಾರು ವಿವರಗಳು ಮತ್ತು ಜಿಲ್ಲಾವಾರು ಅನುದಾನ ಹಂಚಿಕೆ ವಿವರಗಳು

ಬಿ) ಪ್ರತಿ ತ್ರೈಮಾಸಿಕ ಅವಧಿಯ ಅಂತ್ಯದಲ್ಲಿ ವಿವಿಧ ಕಾರ್ಯಕ್ರಮಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ಪಟ್ಟಿ

ಸಿ) ಅನುಷ್ಠಾನಗೊಂಡ ಕಾರ್ಯಕ್ರಮಗಳ/ಪೂರ್ಣಗೊಂಡ ಕಾಮಗಾರಿಗಳ ಮಾಹಿತಿಯನ್ನು ಪ್ರತಿ 6 ತಿಂಗಳಿಗೊಮ್ಮೆ ಅಪ್ ಲೋಡ್ ಮಾಡುವುದು.

15. **ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಅನುಷ್ಠಾನದಲ್ಲಿ ಪ್ರಶಂಸಾರ್ಹವಾದ ಕಾರ್ಯಸಾಧನೆಗೆ ಪ್ರೋತ್ಸಾಹಧನ;**

1) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಕಾಯ್ದೆ, ನಿಯಮಗಳ ಉತ್ಕೃಷ್ಟ ಅನುಷ್ಠಾನ, ಪಾರದರ್ಶಕತೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸೌಲಭ್ಯ ವಿತರಣೆಯಲ್ಲಿ ಪ್ರಶಂಸಾರ್ಹವಾದ ಕಾರ್ಯಸಾಧನೆ ಮಾಡಿದ ಇಲಾಖೆಗಳು/ಜಿಲ್ಲೆಗಳು ಮತ್ತು ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಪ್ರೋತ್ಸಾಹಧನ/ಪ್ರಶಸ್ತಿಯನ್ನು ನೀಡುವುದು. ಪ್ರೋತ್ಸಾಹಧನ/ಪ್ರಶಸ್ತಿಗೆ ನಿರ್ದಿಷ್ಟ ಮಾನದಂಡಗಳು;- (ಎ) ನಿಗದಿಪಡಿಸಿದ ಆರ್ಥಿಕ ಗುರಿಯಲ್ಲಿ ವಿನಿಯೋಗಿಸಿದ ಅನುದಾನ (ಬಿ) ಭೌತಿಕ ಸಾಧನೆ ಮತ್ತು ಅನುಷ್ಠಾನದ ಗುಣಮಟ್ಟ (ಸಿ) ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಅನುಸರಿಸಿದ ನವೀನ ಕ್ರಮಗಳು (ಡಿ) ಕುಂದುಕೊರತೆ ನಿವಾರಣೆಗೆ ಬಳಸಿದ ಯಾಂತ್ರಿಕ ವ್ಯವಸ್ಥೆ (ಇ) ಒಟ್ಟಾರೆ ಕಾರ್ಯಸಾಧನೆ ಮತ್ತು ಸಾಧಿಸಿದ ಸಾಧನೆಗಳ ಬಗ್ಗೆ ದಾಖಲೆಗಳ ನಿರ್ವಹಣೆ.

2) ಅತ್ಯುತ್ತಮ ಕಾರ್ಯಸಾಧನೆ ಮಾಡಿದ ಇಲಾಖೆ ಮತ್ತು ವೈಯಕ್ತಿಕ ಅಧಿಕಾರಿಯ ಹೆಸರನ್ನು ನೋಡಲ್ ಏಜೆನ್ಸಿಯು ರಾಜ್ಯ ಪರಿಷತ್‌ನ ಅನುಮೋದನೆಗೆ ಶಿಫಾರಸ್ಸು ಮಾಡುವುದು.

**16. ಜಿಲ್ಲಾ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು(ಡಿ.ಎಂ.ಸಿ);**

1) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಂಡಿರುವ ಬಗ್ಗೆ ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಖಚಿತಪಡಿಸಿಕೊಳ್ಳುವುದು.

2) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ತಿಂಗಳಲ್ಲಿ ಒಂದು ಬಾರಿ ಸಭೆ ಸೇರಿ ಆರ್ಥಿಕ ಮತ್ತು ಭೌತಿಕ ಪ್ರಗತಿ ಪರಿಶೀಲನೆ ನಡೆಸುವುದು.

3) ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಗತಿ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾಡಳಿತದ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಿರುವುದನ್ನು ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಖಚಿತಪಡಿಸಿಕೊಳ್ಳುವುದು.

4) ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಅಭಿವೃದ್ಧಿಯಲ್ಲಿ ಗುರುತಿಸಲ್ಪಟ್ಟ ಅಭಿವೃದ್ಧಿ ಅಂತರವನ್ನು ಕಡಿಮೆಗೊಳಿಸಿರುವ/ಹೋಗಲಾಡಿಸಿರುವ ಬಗ್ಗೆ ಪರಿಶೀಲನೆ ನಡೆಸುವುದು.

5) ಕಾರ್ಯಕ್ರಮವಾರು, ಗ್ರಾಮವಾರು, ಪಂಚಾಯತ್‌ವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಮತ್ತು ಫಲಾನುಭವಿಗಳ ಪಟ್ಟಿಯನ್ನು ಇಟ್ಟುಕೊಳ್ಳುವುದು ಹಾಗೂ ಅವುಗಳನ್ನು ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡುವುದು.

6) ಸೋಷಿಯಲ್ ಆಡಿಟ್ ವರದಿಗಳ ಅಂಶಗಳನ್ನು ಪರಿಶೀಲನೆ ಮಾಡಿ ವರದಿ ಆಧಾರದ ಮೇಲೆ ಅವಶ್ಯಕ ಸುಧಾರಿತ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದು.

7) ಜಿಲ್ಲಾ ಪ್ರಾಜೆಕ್ಟ್‌ಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿಯಲ್ಲಿ ಅಂತರದ ವಿಶ್ಲೇಷಣೆ ಮತ್ತು ಸುಧಾರಣೆಯನ್ನು ಸುಲಭಗೊಳಿಸುವುದು.

8) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆ ಮೇರೆಗೆ ಅನುಷ್ಠಾನಗೊಳಿಸಿರುವ ಕೆಲಸಗಳು/ಸ್ಕೀಮುಗಳ ಬಗ್ಗೆ ಮೂರನೇ ಪಕ್ಷಕಾರ ಭೌತಿಕ ಸತ್ಯಾಪನೆಯನ್ನು ಸಹ ಕೈಗೊಳ್ಳತಕ್ಕದ್ದು.

9) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಅನುಷ್ಟಾನಗೊಳಿಸಿದ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಜಿಲ್ಲಾಮಟ್ಟದ ಇಲಾಖೆಗಳು ಜಿಲ್ಲಾ ಮೇಲ್ವಿಚಾರಣಾ ಸಮಿತಿಗೆ ಈ ನಿಯಮಕ್ಕೆ ಲಗತ್ತಿಸಿದ ನಮೂನೆ DPR–1 (SCSA) ಮತ್ತು DPR –2 (TSA) ರಲ್ಲಿ ಸಲ್ಲಿಸುವುದು.

10) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಕ್ರೋಢೀಕೃತ ತ್ರೈಮಾಸಿಕ ವರದಿಯನ್ನು ರಾಜ್ಯಮಟ್ಟದ ನೋಡಲ್ ಇಲಾಖೆಗೆ ಅನುಸೂಚಿತ ಜಾತಿಗಳ ಉಪಹಂಚಿಕೆ ಸಂಬಂಧಿಸಿದಂತೆ ಈ ನಿಯಮಕ್ಕೆ ಲಗತ್ತಿಸಿದ QPR-1 ಮತ್ತು ಬುಡಕಟ್ಟುಗಳ ಉಪಹಂಚಿಕೆಗೆ ಸಂಬಂಧಿಸಿದಂತೆ QPR-2 ರಲ್ಲಿ ಸಲ್ಲಿಸುವುದು.

11) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳನ್ನು ಅನುಷ್ಠಾನಗೊಳಿಸುವ ಫಲಿತಾಂಶದ ಜೊತೆಗೆ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳ ಮೇಲೆ ಅಭಿವೃದ್ಧಿಯಲ್ಲಿ ಅಂತರವನ್ನು ಕಡಿಮೆಗೊಳಿಸುವ ಸಾಧನೆಗಳು ಒಳಗೊಂಡಂತೆ ಆರ್ಥಿಕ ಮತ್ತು ಭೌತಿಕ ಸಾಧನೆಗಳನ್ನು ಇಲಾಖೆವಾರು ವಾರ್ಷಿಕ ವರದಿಯನ್ನು ನೋಡಲ್ ಇಲಾಖೆಗೆ ಸಲ್ಲಿಸತಕ್ಕದ್ದು.

12) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕುಂದುಕೊರತೆಗಳ ವಿಷಯದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕುಂದುಕೊರತೆಗಳ ನಿವಾರಣ ಘಟಕವಾಗಿ ಸಹ ಕಾರ್ಯ ನಿರ್ವಹಿಸತಕ್ಕದ್ದು.

13) ಸರ್ಕಾರ ಅಥವಾ ಅನುಸೂಚಿತ ಜಾತಿ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ನೋಡಲ್ ಏಜೆನ್ಸಿಗಳು ಕಾಲಕಾಲಕ್ಕೆ ನೀಡುವ ಯಾವುದೇ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

17. **ಅನುಸೂಚಿತ ಜಾತಿ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿ ರಚನೆ ಮತ್ತು ಸಮಿತಿಯ ಪ್ರಕಾರ್ಯಗಳು; ತಿದ್ದುಪಡಿ ಅಧಿನಿಯಮ ಸೆಕ್ಷನ್–11(3)ರಂತೆ**

1) ಪ್ರತಿ ತಾಲ್ಲೂಕಿನಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡ ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯು ಇರತಕ್ಕದ್ದು.

| | | |
|---|---|---|
| 1 | ಕಾರ್ಯ ನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್ | ಅಧ್ಯಕ್ಷರು |

| | | |
|---|---|---|
| 2 | ತಾಲ್ಲೂಕಿನ ತಹಶೀಲ್ದಾರರು | ಉಪಾಧ್ಯಕ್ಷರು |
| 3 | ಅನುಸೂಚಿತ ಜಾತಿ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳನ್ನು ಅನುಷ್ಠಾನ ಮಾಡುವ ತಾಲ್ಲೂಕು ಮಟ್ಟದ ಇಲಾಖಾ ಅಧಿಕಾರಿಗಳು | ಸದಸ್ಯರು |
| 4 | ಜಿಲ್ಲಾಧಿಕಾರಿಗಳು, ನಾಮನಿರ್ದೇಶನ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಚುನಾಯಿತ ಸದಸ್ಯರು | ಸದಸ್ಯರು |
| 5 | ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |

ಎ) ನಾಮ ನಿರ್ದೇಶಿತ ಸದಸ್ಯರ ಪದಾಅವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು.

ಬಿ) ನಾಮ ನಿರ್ದೇಶಿತ ಸದಸ್ಯರನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಸಕಾರಣಗಳನ್ನು ದಾಖಲಿಸಿ ಸದಸ್ಯತ್ವದಿಂದ ತೆಗೆದುಹಾಕಬಹುದು

ಸಿ) ತಾಲ್ಲೂಕು ಪಂಚಾಯತ್ ಸಭೆಗಳಿಗೆ ಹಾಜರಾಗುವಾಗ ಪಡೆಯುವ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಗಳಿಗೆ ನಾಮನಿರ್ದೇಶಿತ ಸದಸ್ಯರು ಅರ್ಹರಾಗಿರುವರು.

**2) ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು;**

1) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ತಾಲ್ಲೂಕುಗಳಲ್ಲಿ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಂಡಿರುವ ಬಗ್ಗೆ ತಾಲ್ಲೂಕು ಮೇಲ್ವಿಚಾರಣಾ ಸಮಿತಿಯು ಖಚಿತಪಡಿಸಿಕೊಳ್ಳುವುದು.

2) ತಾಲ್ಲೂಕು ಮೇಲ್ವಿಚಾರಣಾ ಸಮಿತಿಯು ತಿಂಗಳಲ್ಲಿ ಒಂದು ಬಾರಿ ಸಭೆ ಸೇರಿ ಆರ್ಥಿಕ ಮತ್ತು ಭೌತಿಕ ಪ್ರಗತಿ ಪರಿಶೀಲನೆ ನಡೆಸುವುದು.

3) ವಿವಿಧ ಅಭಿವೃದ್ಧಿ ಇಲಾಖೆಗಳ ಮಾಸಿಕ ಪ್ರಗತಿ ವಿವರಗಳನ್ನು ಅನುಸೂಚಿತ ಜಾತಿಗಳ ಉಪಹಂಚಿಕೆ ಸಂಬಂಧಿಸಿದಂತೆ ಈ ನಿಯಮಕ್ಕೆ ಲಗತ್ತಿಸಿದ TPR-1 ಮತ್ತು ಬುಡಕಟ್ಟುಗಳ ಉಪಹಂಚಿಕೆಗೆ ಸಂಬಂಧಿಸಿದಂತೆ TPR-2 ರಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಗೆ ಸಲ್ಲಿಸುವುದು.

4) ಆಯಾ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಅಭಿವೃದ್ಧಿಯಲ್ಲಿ ಗುರುತಿಸಲ್ಪಟ್ಟ ಅಭಿವೃದ್ಧಿ ಅಂತರವನ್ನು ಕಡಿಮೆಗೊಳಿಸಿರುವ/ಹೋಗಲಾಡಿಸಿರುವ ಬಗ್ಗೆ ಪರಿಶೀಲನೆ ನಡೆಸುವುದು.

5) ಕಾರ್ಯಕ್ರಮವಾರು, ಗ್ರಾಮವಾರು ಮತ್ತು ಪಂಚಾಯತ್‌ವಾರು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಮತ್ತು ಫಲಾನುಭವಿಗಳ ಪಟ್ಟಿಯನ್ನು ನಿರ್ವಹಿಸುವುದು.

6) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆ ಮೇರೆಗೆ ಅನುಷ್ಠಾನಗೊಳಿಸಿರುವ ಕೆಲಸಗಳು/ಸ್ಕೀಮುಗಳ ಬಗ್ಗೆ ಮೂರನೇ ಪಕ್ಷಕಾರ ಭೌತಿಕ ಸತ್ಯಾಪನೆಯನ್ನು ಸಹ ಕೈಗೊಳ್ಳತಕ್ಕದ್ದು.

7) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳನ್ನು ಅನುಷ್ಠಾನಗೊಳಿಸುವ ಫಲಿತಾಂಶದ ಜೊತೆಗೆ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳ ಮೇಲೆ ಅಭಿವೃದ್ಧಿಯಲ್ಲಿ ಅಂತರವನ್ನು ಕಡಿಮೆಗೊಳಿಸುವ ಸಾಧನೆಗಳು ಒಳಗೊಂಡಂತೆ ಆರ್ಥಿಕ ಮತ್ತು ಭೌತಿಕ ಸಾಧನೆಗಳನ್ನು ಇಲಾಖೆವಾರು ವಾರ್ಷಿಕ ಪ್ರಗತಿ ವರದಿಯನ್ನು ನೋಡಲ್ ಇಲಾಖೆಗೆ ಸಲ್ಲಿಸತಕ್ಕದ್ದು.

8) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕುಂದುಕೊರತೆಗಳ ವಿಷಯದಲ್ಲಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕುಂದುಕೊರತೆಗಳ ನಿವಾರಣಾ ಘಟಕವಾಗಿ ಸಹ ಕಾರ್ಯ ನಿರ್ವಹಿಸತಕ್ಕದ್ದು.

9) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ಅನುಸೂಚಿತ ಜಾತಿ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ನೀಡಬಹುದಾದ ಯಾವುದೇ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

18) **ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕದ ರಚನೆ (9ನೇ ಪ್ರಕರಣ)**

1) ನೋಡಲ್ ಇಲಾಖೆಯ ಸಚಿವಾಲಯದಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕವನ್ನು, ಅಧಿನಿಯಮ ಮತ್ತು ಈ ನಿಯಮಗಳ ಮೇರೆಗೆ ವಿಶೇಷವಾಗಿ ಗೊತ್ತುಪಡಿಸಿದ ನೋಡಲ್ ಏಜೆನ್ಸಿಯು ಅದರ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ನೆರವಾಗುವಂತೆ ರಚಿಸತಕ್ಕದ್ದು.

2) ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕವು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿ ಘಟಕದ ಮುಖ್ಯಸ್ಥನಾಗಿರತಕ್ಕದ್ದು.

ಎ. ಘಟಕದ ಪ್ರಕಾರ್ಯಗಳನ್ನು ನಿರ್ವಹಿಸಲು ಎಲ್ಲಾ ಇತರ ಅಗತ್ಯ ಪೂರಕ ಸಿಬ್ಬಂದಿ.

ಬಿ. ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕದ ಸಮರ್ಪಕ ನಿರ್ವಹಣೆಗಾಗಿ ರಾಜ್ಯ ಸರ್ಕಾರವು ಅವಶ್ಯಕತೆಗನುಗುಣವಾಗಿ ಅಂಥ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಬೇರೆ ಇಲಾಖೆಗಳಿಂದ ನಿಯೋಜನೆ ಮಾಡಿಕೊಳ್ಳುವುದು.

19. **ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು (9ನೇ ಪ್ರಕರಣ)**

ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕವು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

ಎ. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳನ್ನು ರೂಪಿಸಲು ಯೋಜನಾ ಇಲಾಖೆಯ ಸಮನ್ವಯದೊಂದಿಗೆ ಯೋಜನೆ ಹಾಗೂ ಮೇಲ್ವಿಚಾರಣೆ ಘಟಕವಾಗಿ ಪ್ರಕಾರ್ಯ ನಿರ್ವಹಿಸುವುದು.

ಬಿ. ಉಪಹಂಚಿಕೆಗಳನ್ನು ಸಿದ್ಧಪಡಿಸುವ ಮತ್ತು ಅಂತಿಮಗೊಳಿಸುವ ಪ್ರಕಾರ್ಯದಲ್ಲಿ ನೋಡಲ್ ಇಲಾಖೆಯೊಂದಿಗೆ ಸಹಕರಿಸುವುದು.

ಸಿ. ಇಲಾಖೆಗಳು ಸಲ್ಲಿಸುವ ಸ್ಕೀಮ್‌ವಾರು ಪ್ರಸ್ತಾವನೆಗಳನ್ನು ಸ್ವೀಕರಿಸುವುದು, ಪರಿಶೀಲಿಸುವುದು ಮತ್ತು ಇಲಾಖೆಯ ಪ್ರಸ್ತಾವನೆಗಳ ಮೇಲೆ ತಾಂತ್ರಿಕ ಟಿಪ್ಪಣಿಗಳನ್ನು ತಯಾರಿಸಿ ಅಭಿವೃದ್ಧಿಯಲ್ಲಿನ ಅಂತರವನ್ನು ಹೋಗಲಾಡಿಸುವ ಗುರಿಯನ್ನು ಗಮನದಲ್ಲಿಟ್ಟುಕೊಂಡು ಕಾಯ್ದೆ ಮತ್ತು ನಿಯಮಗಳ ಆಧಾರದ ಮೇಲೆ ಮೌಲ್ಯನಿರ್ಣಯ ಮಾಡಿ ನೋಡಲ್ ಏಜೆನ್ಸಿಯ ಪರಿಶೀಲನೆಗಾಗಿ ಸಲ್ಲಿಸುವುದು.

ಡಿ. ಅಭಿವೃದ್ಧಿ ಇಲಾಖೆಗಳು ಬಜೆಟ್ ಪ್ರಸ್ತಾವನೆಗಳನ್ನು ನೋಡಲ್ ಏಜೆನ್ಸಿಯ ಪರಿಶೀಲನೆಗಾಗಿ ಮಂಡಿಸಲು ಅನುಕೂಲವಾಗುವಂತೆ ಸಭೆಯನ್ನು ನಿಗದಿಪಡಿಸುವುದು.

ಇ. ವೆಬ್ ಪೋರ್ಟಲ್ ಅನ್ನು ನಿರ್ವಹಿಸುವುದು.

ಎಫ್. ಸಾಮಾಜಿಕ ಲೆಕ್ಕಪರಿಶೋಧನೆಗಳನ್ನು ಕ್ರಮಬದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಯ ನಿರ್ಣಯಗಳನ್ನು ಅನುಸರಿಸುವುದು.

ಜಿ. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ನಿಧಿಗಳ ಲೆಕ್ಕಪತ್ರಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯಲ್ಲಿ ಉಪಹಂಚಿಕೆ ಘಟಕದೊಂದಿಗೆ ಸಮನ್ವಯಗೊಳಿಸುವುದು.

ಹೆಚ್. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳಿಂದ ಮಾಸಿಕ ಪ್ರಗತಿ ವರದಿಗಳನ್ನು ಪಡೆಯುವುದು ಮತ್ತು ಪರಿಶೀಲನೆ ನಡೆಸುವುದು.

ಐ. ಅನುಸೂಚಿತ ಜಾತಿಗಳ ಉಪಹಂಚಿಕೆ ಮತು ಬುಡಕಟ್ಟು ಉಪಹಂಚಿಕೆ ನಿಧಿಯ ಪ್ರಭಾವ ನಿರ್ಧರಿಸಲು ಸಾಮಾಜಿಕ, ಆರ್ಥಿಕ ಮತ್ತು ಮಾನವ ಅಭಿವೃದ್ಧಿ ಸೂಚಕಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಸಮರ್ಪಕವಾಗಿ ನಿರ್ವಹಿಸುವುದು.

ಜೆ. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ನಿಧಿಯ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪರಿಣಾಮಗಳ ಬಗ್ಗೆ ವಾರ್ಷಿಕ ವರದಿಗಳನ್ನು ಪ್ರಕಟಿಸುವುದು.

ಕೆ. ಅನುಷ್ಠಾನ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳಿಗೆ ಸಾಮರ್ಥ್ಯವರ್ಧನೆ ತರಬೇತಿ ನೀಡಲು ವ್ಯವಸ್ಥೆ ಮಾಡುವುದು.

ಎಲ್. ಉಪಹಂಚಿಕೆಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ನಿಯತಕಾಲಿಕ ಪುನರಾವಲೋಕನ ಸಭೆಗಳನ್ನು ನಡೆಸಲು ಏರ್ಪಾಡು ಮಾಡುವುದು ಮತ್ತು ಮುಂದಿನ ಕ್ರಮಕೈಗೊಳ್ಳಲು ಅನುಷ್ಠಾನ ಏಜೆನ್ಸಿಗಳಿಗೆ ಮಾರ್ಗದರ್ಶನವನ್ನು ನೀಡುವುದು.

ಎಂ. ಅಧಿನಿಯಮ ಮತ್ತು ನಿಯಮಗಳ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅರಿವು ಮೂಡಿಸಲು ಮತ್ತು ಸಮೂಹ ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸಲು ಸೌಲಭ್ಯ ಕಲ್ಪಿಸುವುದು.

ಎನ್. ವಿವಿಧ ಇಲಾಖೆಗಳು ಅನುಷ್ಠಾನಗೊಳಿಸಿದ ಕಾರ್ಯಕ್ರಮ/ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಸೌಲಭ್ಯಗಳ ಪರಿಶೀಲನೆ ನಡೆಸುವುದು.

ಓ. ಪ್ರಖ್ಯಾತ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ತಜ್ಞರ ಸೇವೆಗಳನ್ನು ಪಡೆದುಕೊಳ್ಳುವ ಮೂಲಕ ನಿಯತ ಕಾಲಿಕ ಅಧ್ಯಯನ, ವಿಚಾರ ಗೋಷ್ಠಿ ಹಾಗೂ ಸಮ್ಮೇಳನಗಳನ್ನು ಕೈಗೊಳ್ಳಲು ನೋಡಲ್ ಇಲಾಖೆಗೆ ನೆರವು ನೀಡುವುದು.

ಪಿ. ನೋಡೆಲ್ ಏಜೆನ್ಸಿ ಮತ್ತು ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ರಾಜ್ಯ ಪರಿಷತ್ ವಹಿಸಬಹುದಾದ ಯಾವುದೇ ಇತರ ಪ್ರಕಾರ್ಯಗಳು;

**20. ಇಲಾಖಾ ಮಟ್ಟದ ಉಪಹಂಚಿಕೆ ಬೆಂಬಲ ಘಟಕ ರಚನೆ (ಪ್ರಕರಣ 10)**

1. ಅನುಷ್ಠಾನ ಇಲಾಖೆಗಳು ಕಾಯ್ದೆ ಮತ್ತು ನಿಯಮಗಳ ಅನುಸಾರ ಈ ಉಪಹಂಚಿಕೆಗಳ ಸಿದ್ಧಪಡಿಸುವಿಕೆ ಮತ್ತು ಸಮರ್ಪಕ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕವನ್ನು ರಚಿಸುವುದು.

2. ಉಪಹಂಚಿಕೆ ಬೆಂಬಲ ಘಟಕಕ್ಕೆ ಜಂಟಿ ನಿರ್ದೇಶಕ ಅಥವಾ ಉಪ-ಕಾರ್ಯದರ್ಶಿ ದರ್ಜೆಯ ಅಧಿಕಾರಿಯು ಮುಖ್ಯಸ್ಥರಾಗಿರದ್ದು, ಅವಶ್ಯ ಸಿಬ್ಬಂದಿಗಳನ್ನು ಒಳಗೊಂಡಿರುವುದು. ಸಂಬಂಧಪಟ್ಟ ಇಲಾಖೆಗಳ ಅಪರ ಮುಖ್ಯಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯು ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ಅಡಿಯಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ.

**21. ಇಲಾಖಾ ಮಟ್ಟದ ಉಪಹಂಚಿಕೆ ಬೆಂಬಲ ಘಟಕದ ಪ್ರಕಾರ್ಯಗಳು (ಪ್ರಕರಣ 10);**

ಇಲಾಖಾ ಮಟ್ಟದ ಉಪಹಂಚಿಕೆ ಬೆಂಬಲ ಘಟಕವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:-

ಎ. ಪ್ರತಿಯೊಂದು ಇಲಾಖೆಯಲ್ಲಿ ಇಲಾಖಾ ಮಟ್ಟದ ಉಪಹಂಚಿಕೆ ಬೆಂಬಲ ಘಟಕವು ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ಅನುಷ್ಠಾನದ ಯೋಜನೆ ಸಿದ್ಧಪಡಿಸುವ ಕಾರ್ಯ ನಿರ್ವಹಿಸುವುದು.

ಬಿ. ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಹಂಚಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನೋಡಲ್ ಇಲಾಖೆಯ ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕಗಳೊಂದಿಗೆ ಸಮನ್ವಯ.

ಸಿ. ರಾಜ್ಯಮಟ್ಟದ ಅನುಷ್ಠಾನ ಇಲಾಖೆಗಳು ಮಾಸಿಕ ಪ್ರಗತಿ ವರದಿಯನ್ನು ನೋಡಲ್ ಇಲಾಖೆಗೆ ಅನುಸೂಚಿತ ಜಾತಿಗಳ ಉಪಹಂಚಿಕೆಗೆ ಸಂಬಂಧಿಸಿದಂತೆ ಈ ನಿಯಮಕ್ಕೆ

ಲಗತ್ತಿಸಿದ MPR-1 ಮತ್ತು ಬುಡಕಟ್ಟುಗಳ ಉಪಹಂಚಿಕೆಗೆ ಸಂಬಂಧಿಸಿದಂತೆ MPR-2ರಲ್ಲಿ ಸಲ್ಲಿಸುವುದು. ಹಾಗೂ ಅನುಷ್ಠಾನ ಇಲಾಖೆಗಳು ಕಾರ್ಯಕ್ರಮವಾರು/ಜಿಲ್ಲಾವಾರು ತ್ರೈಮಾಸಿಕ ಪ್ರಗತಿ ವರದಿಗಳನ್ನು ಈ ನಿಯಮಕ್ಕೆ ಲಗತ್ತಿಸಿದ ಅನುಸೂಚಿತ ಜಾತಿಗಳ ಉಪಹಂಚಿಕೆಗೆ ಸಂಬಂಧಿಸಿದಂತೆ ಈ ನಿಯಮಕ್ಕೆ ಲಗತ್ತಿಸಿದ QPR-1 ಮತ್ತು ಬುಡಕಟ್ಟುಗಳ ಉಪಹಂಚಿಕೆಗೆ ಸಂಬಂಧಿಸಿದಂತೆ QPR-2 ರಲ್ಲಿ ಸಲ್ಲಿಸುವುದು.

**22. ಆರ್ಥಿಕ ಇಲಾಖೆಯಲ್ಲಿ ಉಪಹಂಚಿಕೆ ಬೆಂಬಲ ಘಟಕದ ರಚನೆ (ಪ್ರಕರಣ 21)**

ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಯಡಿ ಆರ್ಥಿಕ ಅನುಮೋದನೆ, ಅನುದಾನ ಬಿಡುಗಡೆ ಇತ್ಯಾದಿ ಪ್ರಕ್ರಿಯೆಗಳನ್ನು ತ್ವರಿತವಾಗಿ ನಿರ್ವಹಿಸಲು ಆರ್ಥಿಕ ಇಲಾಖೆಯಲ್ಲಿ ಅಗತ್ಯ ಬೆಂಬಲ ಸಿಬ್ಬಂದಿಗಳೊಂದಿಗೆ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ ಮಟ್ಟದ ಅಧಿಕಾರಿ ಮುಖ್ಯಸ್ಥರಾಗಿ ಒಂದು ಉಪಹಂಚಿಕೆ ಘಟಕವನ್ನು ಸ್ಥಾಪಿಸುವುದು.

**23. ಅನುಸೂಚಿತ ಜಾತಿಗಳ ಉಪಹಂಚಿಕೆ ಬುಡಕಟ್ಟು ಹಂಚಿಕೆಗಳ ಸಾಮಾಜಿಕ ಲೆಕ್ಕ ಪರಿಶೋಧನೆ;**

1) ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಅಡಿಯಲ್ಲಿ ಭರಿಸಿದ ವೆಚ್ಚ ಮತ್ತು ಫಲಿತಾಂಶದ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಲು ನೋಡಲ್ ಇಲಾಖೆಯು ಕಾಲಕಾಲಕ್ಕೆ ಒಂದು ಸೂಕ್ತ ಏಜೆನ್ಸಿಯನ್ನು ನೇಮಕ ಮಾಡತಕ್ಕದ್ದು.

2) ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದಕ್ಕಾಗಿ ವಿಧಿ–ವಿಧಾನಗಳನ್ನು ನೋಡಲ್ ಇಲಾಖೆಯು ಇತರ ಇಲಾಖೆಗಳೊಂದಿಗೆ ಸಮಾಲೋಚಿಸಿ ನಿರ್ಧರಿಸುವುದು. ನೋಡಲ್ ಇಲಾಖೆಯು ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಅವಶ್ಯಕ ಅನುದಾನ ಒದಗಿಸತಕ್ಕದ್ದು.

3) ಸಾಮಾಜಿಕ ಲೆಕ್ಕಪರಿಶೋಧನೆಯ ಅಂಶಗಳನ್ನು ನೋಡೆಲ್ ಏಜೆನ್ಸಿ ಮತ್ತು ಅನುಪಾಲನಾ ಕ್ರಮಗಳನ್ನು ಕೈಗೊಳ್ಳಬೇಕಾದ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರತಕ್ಕದ್ದು.

4) ಸಾಮಾಜಿಕ ಲೆಕ್ಕ ಪರಿಶೋಧನೆಯ ಅಂಶಗಳನ್ನು ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು. ಸಂಬಂಧಪಟ್ಟ ಇಲಾಖೆಗಳು ಆರು ತಿಂಗಳ ಒಳಗಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಯ ಅಂಶಗಳ ಮೇಲೆ ಕ್ರಮಕೈಗೊಳ್ಳುವುದು. ತಪ್ಪಿದಲ್ಲಿ, ಅದನ್ನು ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಕರ್ತವ್ಯಲೋಪವೆಂದು ಪರಿಗಣಿಸಿ ಸೂಕ್ತ ದಂಡನಾ ಉಪಬಂಧಗಳನ್ನು ಅನ್ವಯಿಸಲಾಗುವುದು.

**24. ದೂರು ಮತ್ತು ದಂಡನೆಗಳು (ಪ್ರಕರಣ 24);**

1) ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ತೋರಿಸುವ ಯಾವುದೇ ಕಾರ್ಯಕಾರಿ/ಯಾರೇ ಸರ್ಕಾರಿ ನೌಕರನ ವಿರುದ್ಧ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳ ಅಧಿನಿಯಮ ಮತ್ತು ನಿಯಮಗಳ ಮೇರೆಗೆ ದೂರು ದಾಖಲಾದಲ್ಲಿ /ಸ್ವತಃ ದೂರು ದಾಖಲಿಸಿಕೊಂಡು ನೋಡಲ್ ಇಲಾಖೆಯು ಕ್ರಮಕೈಗೊಳ್ಳುವುದು. ಯಾರೇ ವ್ಯಕ್ತಿಯು ಲಿಖಿತ ದೂರನ್ನು ನೋಡಲ್ ಇಲಾಖೆಗೆ ಸಲ್ಲಿಸಬಹುದು.

2) ದೂರುಗಳು ನಿರ್ದಿಷ್ಟವಾಗಿದ್ದು, ಆತನ/ಆಕೆಯ ವಿವರಗಳನ್ನು ಎಂದರೆ–ಪದನಾಮ, ವಿಳಾಸ ಮತ್ತು ಸಹಿಯೊಂದಿಗೆ ಸಲ್ಲಿಸತಕ್ಕದ್ದು.

3) ದೂರಿನ ಅಂಶಗಳನ್ನು ಪರಿಶೀಲಿಸಿ ದೂರನ್ನು ವಿಚಾರಣೆ ನಡೆಸಿ ವರದಿ ನೀಡಲು ಸೂಕ್ತ ಪ್ರಾಧಿಕಾರಕ್ಕೆ ಕಳುಹಿಸಬೇಕೇ ಎಂಬ ಬಗ್ಗೆ ನೋಡಲ್ ಇಲಾಖೆಯು ತೀರ್ಮಾನಿಸುವುದು.

4) ವಿಚಾರಣಾ ಪ್ರಾಧಿಕಾರವು ದೂರಿನ ಬಗ್ಗೆ ವಿಚಾರಣೆ ನಡೆಸಲು ದೂರನ್ನು ಬೆಂಬಲಿಸುವ ಹೆಚ್ಚುವರಿ ಮಾಹಿತಿ ಮತ್ತು ದಾಖಲೆಗಳನ್ನು ಅವಶ್ಯವಿದ್ದಲ್ಲಿ ಪಡೆದುಕೊಳ್ಳಬಹುದು.

5) ವಿಚಾರಣಾ ಪ್ರಾಧಿಕಾರವು ದೂರನ್ನು ಸ್ವೀಕರಿಸಿದ ತೊಂಭತ್ತು ದಿನಗಳೊಳಗಾಗಿ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವುದು.

6) ನೋಡಲ್ ಇಲಾಖೆಯು ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಅದನ್ನು ನೋಡಲ್ ಏಜೆನ್ಸಿಯ ಮುಂದೆ ಮಂಡಿಸಿ ಅಪರಾಧ ಸ್ವರೂಪದ ಆಧಾರದ ಮೇಲೆ ನೋಡಲ್ ಏಜೆನ್ಸಿ ಅನುಮೋದನೆ ಪಡೆದು ಸೂಕ್ತಕ್ರಮ ತೆಗೆದುಕೊಳ್ಳುವುದು.

**25. ಕಾಯ್ದೆಯ ಸೆಕ್ಷನ್ (25) ರನ್ವಯ ದೂರು ದಾಖಲಿಸುವುದು;**

ರಾಜ್ಯಮಟ್ಟದ ಇಲಾಖಾ ಅನುಷ್ಠಾನ ಅಧಿಕಾರಿ/ನೌಕರರು ಎಸಗಿದ ಕರ್ತವ್ಯಲೋಪದ ಬಗ್ಗೆ ಜಂಟಿ ನಿರ್ದೇಶಕರು SCSA/TSA, ಜಿಲ್ಲಾಮಟ್ಟದ ಮತ್ತು ಅದಕ್ಕಿಂತ ಕೆಳಹಂತದ ಇಲಾಖಾ ಅನುಷ್ಠಾನಾಧಿಕಾರಿ/ನೌಕರರು ಎಸಗಿದ ಕರ್ತವ್ಯಲೋಪದ ಬಗ್ಗೆ ಜಂಟಿ ನಿರ್ದೇಶಕರು/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಕಾಯ್ದೆಯ ಸೆಕ್ಷನ್ (25)ರನ್ವಯ ದೂರು ದಾಖಲಿಸಲು ಅಧಿಕಾರ ಹೊಂದಿರುತ್ತಾರೆ. ಪರಂತು, ನೋಡಲ್ ಏಜೆನ್ಸಿಯ ಪೂರ್ವಾನುಮತಿ ಪಡೆದ ನಂತರ ಮಾತ್ರವೇ ದೂರುಗಳನ್ನು ದಾಖಲಿಸತಕ್ಕದ್ದು.

**26. ವಾರ್ಷಿಕ ವರದಿ;**

ಕಾಯ್ದೆಯ ಸೆಕ್ಷನ್ (24) ರನ್ವಯ ವರದಿ ಮಾಡುವ ಹಣಕಾಸು ವರ್ಷದಲ್ಲಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆಗಳಡಿ ಇಲಾಖಾವಾರು ಸಾಧನೆ ಮತ್ತು ಅನುದಾನದ ಬಳಕೆ ಹಾಗೂ ಫಲಿತಾಂಶದ ವಿವರಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ನೋಡಲ್ ಇಲಾಖೆಯು, ನೋಡಲ್ ಏಜೆನ್ಸಿ ಮತ್ತು ರಾಜ್ಯ ಪರಿಷತ್‌ನ ಅನುಮೋದನೆಯೊಂದಿಗೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು.

(ಗೋಪಾಲ್)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ